# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

(ಹಿಂದಿನ ಪದನಾಮ - 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ -2021) ಪಿಎಂ-ಉಷಾ (ಮೇರು)

# KITTURU RANI CHANNAMMA UNIVERSITY

*(Formerly known as 'Rani Channamma University, Belagavi')*

**Vidyasangama, National Highway – 04, Bhootaramanahatti, Belagavi – 591156**

**(NAAC Accredited with B+ Grade – 2021) PM-UShA (MERU)**

**E-mail:**academic@rcub.ac.in
registrar@rcub.ac.in

ಕುಲಸಚಿವರ ಕಾರ್ಯಾಲಯ

**Office of the Registrar**

**Website:** www.rcub.ac.in
**Phone No.:** 0831-2565241
0831-2565258


ಕ್ರ.ಸಂ.: ಕಿರಾಚವಿ/ಬೆಳಗಾವಿ/ಕುಸಕಾ/ವಿಮವಿ/ಸ್ನಾತಕೋತ್ತರ/2026-27/5033 ದಿನಾಂಕ: 11 NOV 2026

## ಸುತ್ತೋಲೆ

**ವಿಷಯ:** 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ/ಎಂ.ಸಿ.ಎ ಪದವಿಯ ಪ್ರಥಮ ಸೆಮಿಸ್ಟರಗೆ ಆಡಳಿತ ಮಂಡಳಿ (Management Quota) ಕೋಟಾದಡಿಯಲ್ಲಿ ಪ್ರವೇಶಾತಿ ಪಡೆಯುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:01-10-2026.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳ ಸಂಯೋಜಿತ/ಸ್ವಾಯುತ್ತ ಸ್ನಾತಕೋತ್ತರ ಎಂ.ಬಿ.ಎ/ಎಂ.ಸಿ.ಎ ಮಹಾವಿದ್ಯಾಲಯಗಳ ಪ್ರಾಚಾರ್ಯರು/ಸಂಯೋಜಕರಿಗೆ ಈ ಮೂಲಕ ತಿಳಿಸುವುದೇನೆಂದರೆ, 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ/ಎಂ.ಸಿ.ಎ ಪದವಿಯ ಪ್ರಥಮ ಸೆಮಿಸ್ಟರಗೆ ಆಡಳಿತ ಮಂಡಳಿಯ (Management Quota) ಕೋಟಾದಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ನಿಯಮಾವಳಿಗಳಂತೆ **ದಿನಾಂಕ:13-11-2026 ರಿಂದ 21-11-2026ರ** ವರೆಗೆ ತಮ್ಮ ಮಹಾವಿದ್ಯಾಲಯದಲ್ಲಿ ಪ್ರವೇಶಾತಿ ಪಡೆದುಕೊಳ್ಳಲು ಈ ಮೂಲಕ ಆದೇಶಿಸಲಾಗಿದೆ.

## ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಸೂಚನೆಗಳು:

1. ಆಡಳಿತ ಮಂಡಳಿಯ ಕೋಟಾದಡಿಯಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿದ ಅರ್ಹತಾ ನಿಯಮಗಳ ಅನುಸಾರ ಪ್ರವೇಶಾತಿ ಮಿತಿಯೊಳಗೆ ಪ್ರವೇಶ ಪಡೆಯುವ ಎಲ್ಲ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯ ನಿಗದಿಪಡಿಸಿದ ಶುಲ್ಕಗಳನ್ನು ಭರಣ ಮಾಡಿಕೊಂಡು ಪ್ರವೇಶ ನೀಡುವುದು.
2. ಸದರಿ ಪ್ರವೇಶಾತಿ ಪ್ರಕ್ರಿಯೆ ಸಂದರ್ಭದಲ್ಲಿ ಕಡ್ಡಾಯವಾಗಿ ಮೂಲ ಅಂಕಪಟ್ಟಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿಕೊಂಡ ನಂತರ ಪ್ರವೇಶಾತಿಯನ್ನು ನೀಡುವುದು ಹಾಗೂ ವಿಶ್ವವಿದ್ಯಾಲಯವು ಸೂಚಿಸುವ ದಿನಾಂಕದಂದು ಆಡಳಿತ ಮಂಡಳಿ ಕೋಟಾದಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಮೂಲ ಅಂಕಪಟ್ಟಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆಗೆ ಹಾಜರಪಡಿಸಬೇಕು.
3. ಅಭ್ಯರ್ಥಿಗಳು ಸಲ್ಲಿಸಿದ ಮೂಲ ಪದವಿ ಅಂಕಪಟ್ಟಿ ಹಾಗೂ ದಾಖಲೆಗಳು, ನಕಲು ಅಥವಾ ತಿದ್ದುಪಡಿಯಾಗಿರುವ ಅಥವಾ ಸುಳ್ಳು ಪದವಿ ಅಂಕಪಟ್ಟಿಗಳ ಹಾಗೂ ಸಂಬಂಧಪಟ್ಟ ದಾಖಲೆಗಳ ಕುರಿತು ತುಂಬಾ ಎಚ್ಚರಿಕೆಯಿಂದ ಪರಿಶೀಲಿಸಿಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳುವುದು. ಒಂದು ವೇಳೆ ಸುಳ್ಳು ಅಂಕಪಟ್ಟಿ ಹಾಗೂ ಖೊಟ್ಟಿ/ನಕಲಿ ದಾಖಲೆಗಳನ್ನು ಪಡೆದುಕೊಂಡು ಪ್ರವೇಶಾತಿ ನೀಡಿದ್ದು ಕಂಡುಬಂದಲ್ಲಿ ಸಂಬಂಧಪಟ್ಟ ಮಹಾವಿದ್ಯಾಲಯಗಳೆ ಹೊಣೆಗಾರರು ಹಾಗೂ ಅಂತಹ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.
4. ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಹಾಗೂ ಬಾಗಲಕೋಟ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಪದವಿ ಪಡೆದ ವಿದ್ಯಾರ್ಥಿಗಳನ್ನು ಹೊರತುಪಡಿಸಿ, UGC ಯಿಂದ ಮಾನ್ಯತೆ ಹೊಂದಿದ ಕರ್ನಾಟಕದ ವಿಶ್ವವಿದ್ಯಾಲಯಗಳು ಹಾಗೂ ಕರ್ನಾಟಕೇತರ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಎಂ.ಬಿ.ಎ/ಎಂ.ಸಿ.ಎ ಪ್ರವೇಶಾತಿ

ಪ್ರಕ್ರಿಯೆಗೆ ಆಯ್ಕೆಯಾದ (Other University Candidates) ಅಭ್ಯರ್ಥಿಗಳು ಪ್ರವೇಶ ಪ್ರಕ್ರಿಯೆಯ ಮುಂಚೆ ಕಡ್ಡಾಯವಾಗಿ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರಗಳನ್ನು (Eligibility Certificate ಪಡೆದುಕೊಂಡು, ಪ್ರವೇಶಗಳನ್ನು ಪಡೆದುಕೊಳ್ಳಬೇಕು.

| Sl. No. | Eligibility Certificate Fee Details | MBA Fees | MCA Fees |
|---|---|---|---|
| 01 | Karnataka Students | Rs.3,820/- | Rs.3,470/- |
| 02 | Non-Karnataka Students | Rs.6,360/- | Rs.11,550/- |
| 03 | Non-resident Indians | Rs.12,710/- | Rs.17,330/- |
| 04 | Foreign Students | Rs.19,060/- | Rs.23,100/- |
| 05 | Admission Without Eligibility Certificate penalty to the Student | Rs.5,090/- | Rs.4,620/- |
| 06 | Admission Without Eligibility Certificate penalty to the Chairman/Principal | Rs.19,060/- | Rs.17,330/- |

5. ಅರ್ಹತಾ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಥಿಗಳು 10 ಮತ್ತು 12ನೇ ತರಗತಿಯ ಹಾಗೂ ಸ್ನಾತಕ ಪದವಿಯ ಎಲ್ಲ ಮೂಲ (Original) ಅಂಕಪಟ್ಟಿಗಳು ಮತ್ತು ದೃಢೀಕರಿಸಿದ ಪ್ರತಿಗಳೊಂದಿಗೆ (One Set Xerox) ಹಾಗೂ ವಿಶ್ವವಿದ್ಯಾಲಯವು ಈ ಕೆಳಗೆ ಸೂಚಿಸಿರುವ ಅವಶ್ಯಕ ದಾಖಲೆ ಹಾಗೂ ಶುಲ್ಕಗಳೊಂದಿಗೆ ಸಂಬಂಧಿಸಿದ ವಿದ್ಯಾರ್ಥಿಯು ಖುದ್ದಾಗಿ ವಿಶ್ವವಿದ್ಯಾಲಯಕ್ಕೆ ಬಂದು ಅರ್ಹತಾ ಪ್ರಮಾಣ ಪತ್ರಕ್ಕೆ ಅರ್ಜಿಯನ್ನು ಸಲ್ಲಿಸುವುದು.
6. ಒಂದು ವೇಳೆ ಸ್ನಾತಕ ಪದವಿ ಅಂಕಪಟ್ಟಿಗಳು ಮುದ್ರಿತಗೊಂಡಿರದೇ ಇದ್ದಲ್ಲಿ ಸಂಬಂಧಿಸಿದ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಿಂದ ದೃಢೀಕರಿಸಿದ ಫಲಿತಾಂಶ ಪತ್ರವನ್ನು (Result Sheet) ಸಲ್ಲಿಸುವುದು.
7. ಒಂದು ವೇಳೆ ಆರ್ಹತಾ ಪ್ರಮಾಣ ಪತ್ರ ಪಡೆಯುವ ಅಭ್ಯರ್ಥಿಗಳ ಪದವಿ ಅಂಕಪಟ್ಟಿಗಳು ವಿಶ್ವವಿದ್ಯಾಲಯಕ್ಕೆ ಅನುಮಾನಾಸ್ಪದ ಎಂದು ಕಂಡುಬಂದಲ್ಲಿ ವಿಶ್ವವಿದ್ಯಾಲಯವು ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ನೈಜತೆ ಪರಿಶೀಲನೆಗೆ ಕಳುಹಿಸಿಕೊಡಲಾಗುವುದು ಹಾಗೂ ಅಂತಹ ಪದವಿ ಅಂಕಪಟ್ಟಿಗಳ ನೈಜತೆ ಪರಿಶೀಲನೆಗೆ ಸಂಬಂಧಿಸಿದ ವಿವಿಧ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ನೈಜತೆ ಪ್ರಮಾಣ ಪತ್ರದ ಶುಲ್ಕಗಳನ್ನು ಸದರಿ ಅಭ್ಯರ್ಥಿಗಳೇ ಭರಿಸಬೇಕು. ಪದವಿ ಅಂಕಪಟ್ಟಿಗಳ ನೈಜತೆ ಕುರಿತು ಪರಿಶೀಲನೆ ಪ್ರಮಾಣ ಪತ್ರ ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಬಂದ ನಂತರ ಸದರಿ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಒಂದು ವೇಳೆ ಪದವಿ ಅಂಕಪಟ್ಟಿಗಳು ನಕಲು ಅಥವಾ ತಿದ್ದುಪಡಿಯಾಗಿರುವ ಅಥವಾ ಸುಳ್ಳು ಪದವಿ ಅಂಕಪಟ್ಟಿಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಅಭ್ಯರ್ಥಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.
8. ಮಹಾವಿದ್ಯಾಲಯದವರು/ಅಭ್ಯರ್ಥಿಗಳು UUCMS ತಂತ್ರಾಂಶದಲ್ಲಿ ತಮ್ಮ ಹೆಸರುಗಳನ್ನು Aadhar Card ದಲ್ಲಿ ಇರುವ ಹಾಗೆ ಸರಿಯಾಗಿ ಭರ್ತಿ ಮಾಡತಕ್ಕದ್ದು ಒಂದು ವೇಳೆ ಹೆಸರುಗಳನ್ನು ತಪ್ಪು ಭರ್ತಿ ಮಾಡಿದ್ದಲ್ಲಿ ಮುಂದಿನ ಎಲ್ಲ ಆಗುಹೋಗುಗಳಿಗೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.
9. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಜಾಲತಾಣದಿಂದ (www.rcub.ac.in) ಪಡೆದು ಅಳವಡಿಸಿಕೊಳ್ಳುವುದು.
10. UUCMS ತಂತ್ರಾಂಶದಲ್ಲಿ ಯಾವುದಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಸಹಾಯವಾಣಿ ಸಂಖ್ಯೆ 0831-2565257 / 234 ಹಾಗೂ E-Mail uucms@rcub.ac.in ಗೆ ಸಂಪರ್ಕಿಸುವುದು.

**ವಿಶೇಷ ಸೂಚನೆ:**

1. 2026-27 ನೇ ಸಾಲಿನಿಂದ ಮಹಾವಿದ್ಯಾಲಯದವರಿಗೆ/ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕಗಳನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿರುವ ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಆದ್ದರಿಂದ ಮಹಾವಿದ್ಯಾಲಯ/ವಿದ್ಯಾರ್ಥಿಗಳು ಕಡ್ಡಾಯವಾಗಿ ಈ ಕೆಳಗೆ ವಿವರಿಸಲಾದ ಹಂತವನ್ನು ಅನುಸರಿಸಿ ಪಾವತಿಸುವುದು:

a. ವಿಶ್ವವಿದ್ಯಾಲಯದ ವೆಬ್‌ಸೈಟ್: **www.rcub.ac.in** ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-201– Admission or Registration Fees.

b. ವಿಶ್ವವಿದ್ಯಾಲಯದ ವೆಬ್‌ಸೈಟ್: **www.rcub.ac.in** ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-302 –Eligibility Certificate Fees

2. 2026-27 ನೇ ಸಾಲಿನ ಮಹಾವಿದ್ಯಾಲಯಗಳ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, ಮಹಾವಿದ್ಯಾಲಯದವರು ವಿಶ್ವವಿದ್ಯಾಲಯಕ್ಕೆ ಭರಿಸಬೇಕಾದ ಪ್ರವೇಶ ಶುಲ್ಕದಲ್ಲಿ ಅರ್ಜಿ ಶುಲ್ಕವನ್ನು ನೀಡಿರುವುದಿಲ್ಲ ಆದ್ದರಿಂದ ಮಹಾವಿದ್ಯಾಲಯದವರು, ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ಕೋಟಾದಡಿಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುವಾಗ ವಿಶ್ವವಿದ್ಯಾಲಯವು ನಿಗದಿಪಡಿಸಿದ ಪ್ರವೇಶಾತಿ ದಿನಾಂಕದೊಳಗೆ ವಿಶ್ವವಿದ್ಯಾಲಯದ ಪ್ರವೇಶ ಶುಲ್ಕದೊಂದಿಗೆ ಅರ್ಜಿ ಶುಲ್ಕವನ್ನು (ಕರ್ನಾಟಕ ವಿದ್ಯಾರ್ಥಿಗಳಿಗೆ ರೂ.250/- ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ರೂ.500/-) ಭರಿಸುವಂತೆ ಮಹಾವಿದ್ಯಾಲಯದವರು ಕ್ರಮವಹಿಸುವುದು.

3. ಮುಂದುವರೆದು, ವಿದ್ಯಾರ್ಥಿಗಳು ಮೇಲೆ ತಿಳಿಸಲಾದ ಕ್ರಮದಂತೆ ಆನ್‌ಲೈನ್ ಮೂಲಕ ಭರಿಸಿದ ಪ್ರವೇಶ ಶುಲ್ಕದ ಮುದ್ರಿತ ಪ್ರತಿಯನ್ನು ಮಹಾವಿದ್ಯಾಲಯಕ್ಕೆ ಸಲ್ಲಿಸುವಂತೆ ಕ್ರಮವಹಿಸುವುದು ಹಾಗೂ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯವು ಸೂಚಿಸುವ ದಿನಾಂಕಗಳಂದು ಪ್ರವೇಶಾತಿ ಮಾಹಿತಿಯೊಂದಿಗೆ PGCET ಮತ್ತು ಆಡಳಿತ ಮಂಡಳಿ ಕೋಟಾದಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳ ವಿವರಗಳನ್ನು ಸಲ್ಲಿಸುವುದು.

**ಉಪಕುಲಸಚಿವರು**

**ಇವರಿಗೆ,**

1. ಪ್ರಾಚಾರ್ಯರು/ಸಂಯೋಜಕರು, ಸಂಯೋಜಿತ MBA/MCA ಮಹಾವಿದ್ಯಾಲಯಗಳು, ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆ.
2. ನೋಡಲ್ ಅಧಿಕಾರಿಗಳು, UUCMS ತಂತ್ರಾಂಶ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಪ್ರತಿ ಮಾಹಿತಿಗಾಗಿ:**

- ಕುಲಸಚಿವರು (ಮೌಲ್ಯಮಾಪನ), ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಹಣಕಾಸು ಅಧಿಕಾರಿಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ಕಿರಾಚವಿ, ಬೆಳಗಾವಿ.
- ಮಾನ್ಯ ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕಿರಾಚವಿ, ಬೆಳಗಾವಿ.